ದಿನಾಂಕಃ 11-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ. ಹೆಚ್. ಎಸ್. ಡಿ., ವಕೀಲರಿಂದ,

ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆ ಸರ್ವೆ ನಂ.152/2 ರಲ್ಲಿ 1 ಎಕರೆ 34 ಗುಂಟೆ ಜಮೀನು ಇರುವ ವಿಸ್ತೀರ್ಣವನ್ನು ವಿಜಯೇಂದ್ರರವರಿಗೆ ಮಾರಾಟ ಮಾಡಿದಾಗ ನನಗೆ 15 ವರ್ಷ ವಯಸ್ಸಾಗಿರಬಹುದು. ಸರ್ವೆ ನಂ.152/2 ರಲ್ಲಿ ಇರುವ 1 ಎಕರೆ 34 ಗುಂಟೆ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ಕುಳ್ಳಯ್ಯನವರ ಜಮೀನು, ಪಶ್ಚಿಮಕ್ಕೆ ಹಾಸನ ಮೈಸೂರು ರಸ್ತೆ, ಉತ್ತರಕ್ಕೆ ಜೆಎಸ್ ಎಸ್ ಸುತ್ತೂರು ಮಠ ರವರ ಆಸ್ತಿ, ದಕ್ಷಿಣಕ್ಕೆ ಚೌಕಹಳ್ಳಿ ಕಾಲೋನಿಗೆ ಹೋಗುವ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕುಬಂಧಿಯೊಳಗಿರುವ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿ ಉಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ08.02.1985 ರಲ್ಲಿ ನನ್ನ ತಂದೆ ಮಾರಾಟ ಮಾಡಿರುವ ಕ್ರಯಪತ್ರದಲ್ಲಿ ಮೇಲ್ಕಂಡ ಚೆಕ್ಕುಬಂಧಿಯನ್ನು ನಮೂದಿಸಿ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.152/2 ರಲ್ಲಿ ಇರುವ 1 ಎಕರೆ 34 ಗುಂಟೆ ಜಮೀನನ್ನು ನನ್ನ ತಂದೆ ವಿಜಯೇಂದ್ರರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

2. ನನ್ನ ತಂದೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ವಿಸ್ತೀರ್ಣ ತಪ್ಪಾಗಿದೆ ಎಂದು ತಿದ್ದುಪಡಿ ಕ್ರಯಪತ್ರ ಮಾಡಿಕೊಳ್ಳಲು ಅಥವಾ ಸದರಿ ಕ್ರಯಪತ್ರವನ್ನು ಪ್ರಶ್ನಿಸಿ ಕ್ರಮ ತೆಗೆದುಕೊಂಡಿರುವುದಿಲ್ಲ. ಕ್ರಯಪತ್ರದಲ್ಲಿ ವಿಸ್ತೀರ್ಣ ತಪ್ಪಾಗಿದೆ ಎಂದು ವಾದಿ 2000 ನೇ ಸಾಲಿನಲ್ಲಿ ತಕರಾರು ಮಾಡಿದಾಗ ಗೊತ್ತಾಗಿರುತ್ತದೆ. ವಿಜಯೇಂದ್ರ ರವರ ಹೆಸರಿಗೆ ನಮೂದಾಗಿರುವ ಮ್ಯುಟೇಶನ್ ವಹಿಯನ್ನು ಪ್ರಶ್ನೆ ಮಾಡಿರುವುದಿಲ್ಲ. ವಿಜಯೇಂದ್ರ ರವರ ಹೆಸರಿಗೆ ಖಾತೆಯಾಗಿರುವ ವಿಷಯ ನನಗೆ 2000 ನೇ



ಇಸವಿಯಲ್ಲಿ ಗೊತ್ತಾಗಿರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ತನ್ನ ತಂದೆಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ

43 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಹಿಯನ್ನು ನಿಪಿ 43(ಎ) ಎಂದು ಗುರುತಿಸಲಾಯಿತು.

3. ವಿಜಯೇಂದ್ರರವರು ವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ದಿನಾಂಕ 27.10.1986 ರಂದು ದಾವಾ ಸ್ವತ್ತನ್ನು ವಿಜಯೇಂದ್ರ ರವರು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಿಜಯೇಂದ್ರ ರವರ ಹೆಸರಿನಲ್ಲಿ ಗ್ರಾಮ ಪಂಚಾಯತಿ ದಾಖಲೆಯಲ್ಲಿ ಖಾತೆ ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ವಿಜಯೇಂದ್ರ ರವರ ಹೆಸರಿಗೆ ಜಂಜರ್ ನಂ.121/11 ಹಳೆ ಜಂಜರ್ ನಂ.123 ಮತ್ತು ವಿಸ್ತೀರ್ಣ ಪೂರ್ವ ಪಶ್ಚಿಮ 121 ಅಡಿ, ಉತ್ತರ ದಕ್ಷಿಣ 90 ಅಡಿ ನಮೂಧು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರದಲಿ ಪೂರ್ವಕ್ಕೆ ವಿಜಯೇಂದ್ರ ರವರಿಗೆ ಸೇರಿದ ಉಳಿಕೆ ಜಮೀನು, ಪಶ್ಚಿಮಕ್ಕೆ ಹಾಸನ ಮೈಸೂರು ರಸ್ತೆ, ಉತ್ತರಕ್ಕೆ ಸುತ್ತೂರು ಮಠ ಆಸ್ತಿ, ದಕ್ಷಿಣಕ್ಕೆ ವಿಜಯೇಂದ್ರ ರವರಿಗೆ ಸೇರಿದ ಉಳಿಕೆ ಜಮೀನು ಎಂದು ನಮೂದು ಮಾಡಿರುತ್ತಾರೆಂದರೆ ಸರಿಯಲ್ಲ. ವಾದಿ ಹೆಸರಿಗೆ ಆದ ಕ್ರಯಪತ್ರದ ಆಧಾರದ ಮೇಲೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಗ್ರಾಮಪಂಚಾಯತಿ ಕಚೇರಿಯಲ್ಲಿ ಇ-ಖಾತಾ ಮಾಡಿಸಲು ಅರ್ಜಿ ನೀಡಿದಾಗ ನಾನು ಸದರಿ ಅರ್ಜಿಗೆ ತಕರಾರು ಮಾಡಿರುತ್ತೇನೆಂದರೆ ಸರಿ. ಗ್ರಾಮ ಪಂಚಾಯತಿ ಅಧಿಕಾರಿಗಳು ಖಾತೆ ಮಾಡದ ಕಾರಣ ವಾದಿಯು ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ನನ್ನ ತಕರಾರಿನಲ್ಲಿ ನಮೂದು ಮಾಡಿರುವ ಚೆಕ್ಕುಬಂಧಿ ಪೂರ್ವಕ್ಕೆ ಆಶಾ ಕೋಂ ಚನ್ನಬಸಪ್ಪನವರ ಜಮೀನು, ಪಶ್ಚಿಮಕ್ಕೆ ಹಾಸನ ಮೈಸೂರು ರಸ್ತೆ, ಉತ್ತರಕ್ಕೆ ಸುತ್ತೂರುಮಠ ಆಸ್ತಿ, ದಕ್ಷಿಣಕ್ಕೆ ಆಶಾ ಕೋಂ ಚನ್ನಬಸಪ್ಪನವರ ಜಮೀನು ಆಗಿರುತ್ತದೆ.



ಆಶಾ ಕೋಂ ಚನ್ನಬಸಪ್ಪನವರು ವಿಜಯೇಂದ್ರರವರಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಚೆಕ್ಕುಬಂಧಿಯಲ್ಲಿ ತೋರಿಸಿರುವ ಆಸ್ತಿ ಮತ್ತು ಪ್ರತಿವಾದಪತ್ರದಲ್ಲಿ ತೋರಿಸಿರುವ ಆಸ್ತಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಲಿಖಿತ ತಕರಾರಿನಲ್ಲಿ ಹೇಳಿರುವ ನಿವೇಶನ ಸಂಖ್ಯೆ.63 ಖಾತೆಯನ್ನು ಯಾವಾಗ ಮಾಡಿಸಿರಬಹುದು ಎಂದು ಗೊತ್ತಿಲ್ಲ. ಸದರಿ ಆಸ್ತಿಯನ್ನು ಖಾತೆ

ಮಾಡಿಸಿಕೊಳ್ಳುವ ಸಮಯದಲ್ಲಿ ನನ್ನ ತಂದೆ ಹೆಸರಿನಲ್ಲಿದ್ದ ಡಿಮ್ಯಾಂಡ್ ರಿಜಿಸ್ಟರ್ ಮತ್ತು ಭೂ ಪರಿವರ್ತನೆ ದಾಖಲೆಯನ್ನು ನೀಡಿರುತ್ತೇನೆ. ನನ್ನ ತಂದೆ ಹೆಸರಿನಲ್ಲಿದ್ದ ಖಾತೆಯ ನಕಲನ್ನು ಹಾಜರುಪಡಿಸಿರುವುದಿಲ್ಲ. ಭೂಪರಿವರ್ತನೆ ಆಗಿರುವ 10 ಗುಂಟೆ ಆಸ್ತಿಯ ಬಗ್ಗೆ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡದೆ ಮೌನವಾಗಿರುತ್ತಾರೆ. ವಿಜಯೇಂದ್ರ ಹೆಸರಿಗೆ ಗ್ರಾಮ ಪಂಚಾಯತಿಯಲ್ಲಿ ಖಾತೆಯಾಗಿರುವುದನ್ನು ಹೊರತುಪಡಿಸಿ ನನ್ನ ತಂದೆ ಹೆಸರಿನಲ್ಲಿ ಯಾವುದೇ ಖಾತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯತಿಯವರು ಖಾತೆ ಮಾಡುವ ಮೊದಲು ನಡೆಸಿರುವ ಪ್ರಕ್ರಿಯೆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

5. ನನ್ನ ಹೆಸರಿಗೆ ಖಾತೆಯಾಗುವ ಪೂರ್ವದಲ್ಲಿ ವಾದಿಯು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 54/2014 ರಂತೆ ದಾವೆಯನ್ನು ಸಲ್ಲಿಸಿ ಶಾಶ್ವತ ನಿರ್ಭಂದಕಾಜ್ಞೆ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿಯು ಮೇಲ್ಕಂಡ ದಾವೆಯನ್ನು ಸಲ್ಲಿಸಿದ ನಂತರ ನಾನು ಪಂಚಾಯತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಖಾತೆಯನ್ನು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯಪತ್ರದಲ್ಲಿ ಪಶ್ಚಿಮ ಮತ್ತು ದಕ್ಷಿಣಕ್ಕೆ ಉದ್ದೇಶಪೂರ್ವಕವಾಗಿ ಖಾಸಗಿ ಸ್ವತ್ತು ಎಂದು ನಮೂದುಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಚೆಕ್ಕುಬಂಧಿಯಲ್ಲಿ ಆಶಾ ಕೋಂ ಚನ್ನಬಸಪ್ಪರವರ ಆಸ್ತಿಯನ್ನು ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಸ್ವತ್ತು ಮತ್ತು ಲಿಖಿತ ತಕರಾರಿನಲ್ಲಿ ನಮೂದಿಸಿರುವ ಸ್ವತ್ತು ಒಂದೇ ಆಗಿದ್ದರೂ ಸಹ ಗೊಂದಲವನ್ನು ಉಂಟುಮಾಡಲು ತಪ್ಪು



ಚೆಕ್ಕುಬಂಧಿಯನ್ನು ನಮೂದು ಮಾಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ 39 ರ ದಾಖಲೆಯಲ್ಲಿ ಭೂ ಪರಿವರ್ತನೆ ಆಗಿರುವ ಬಗ್ಗೆ ನಮೂದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ.

6. ವಾದಿ ಹೆಸರಿಗೆ ಕ್ರಯಪತ್ರದ ಆಧಾರದಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಇರಬಹುದು. ನನಗೆ 2 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ

ವಾದಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸುವಂತೆ ಪತ್ರ ವ್ಯವಹಾರ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿ ಅಧಿಕಾರಿಗಳು ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎರಡು ಖಾತೆಗಳಿದೆ ಎಂದು ವರದಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಯಾವುದೇ ಉತ್ತರ ನೀಡದೇ ಮೌನವಾಗಿರುತ್ತಾರೆ. ವಾದಿ ಹೆಸರಿಗೆ ಆಗಿರುವ ಕ್ರಯಪತ್ರಕ್ಕೆ ನನ್ನ ತಂದೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ವಾದಿಯ ಕ್ರಯಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ. ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ